


# ಗುರು

ಸ್ವಾಮಿ ಬ್ರಹ್ಮಾನಂದ

ಶ್ರೀರಾಮಕೃಷ್ಣರ ಮಾನಸಪುತ್ರ ಎಂದು ಪ್ರಸಿದ್ಧರಾಗಿರುವ ಸ್ವಾಮಿ ಬ್ರಹ್ಮಾನಂದರು ಪರಮಶ್ರೇಷ್ಠ ಗುರುಗಳು. ಅವರು ಸ್ವತಃ ಗುರುವಿನ ಬಗ್ಗೆ ಬರೆದ ಬಂಗಾಳಿ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದವರು ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರಾದ ಪಿ. ಉಷಾ ಅವರು. ಮೂಲ ಬಂಗಾಳಿ ಲೇಖನವು "ಉದ್ಬೋಧನ" ಮಾಸಿಕದಲ್ಲಿ ಪ್ರಕಟವಾಗಿತ್ತು.

## ಗುರುವಿನ ಆವಶ್ಯಕತೆ

ಇತ್ತೀಚೆಗೆ ಸಾಧಾರಣವಾಗಿ ಎಲ್ಲೆಡೆಯೂ ಧರ್ಮದ ಆಂದೋಲನವು ಸ್ವಲ್ಪಮಟ್ಟಿಗಾದರೂ ನಡೆಯುತ್ತಿರುವುದು ಕಾಣುತ್ತಿದೆ. ವಿಶೇಷವೆಂದರೆ ಆಂಗ್ಲ ಶಿಕ್ಷಣವನ್ನು ಪಡೆದಿರುವವರೂ ಕೂಡ ಈಗೀಗ ನಾಸ್ತಿಕರಾಗಿರದೆ, ಯಾವುದೇ ರೀತಿಯಲ್ಲಾದರೂ ಧರ್ಮಾಂದೋಲನದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಧರ್ಮಚರ್ಚೆಯನ್ನು ಮಾಡುವವರಲ್ಲಿ ವಿಭಿನ್ನ ಪ್ರಕೃತಿಯ ಜನರನ್ನು ನಾವು ಕಾಣುತ್ತೇವೆ. ನಮ್ಮ ಸಂಪ್ರದಾಯದಂತೆ ಕುಲಗುರುಗಳಿಂದ ದೀಕ್ಷೆಯನ್ನು ಪಡೆದು, ಸಾಧಾರಣವಾಗಿ ಎಲ್ಲರೂ ಮಾಡುವಂತೆ, ಜಪ-ತಪಗಳನ್ನು ಮಾಡಿದರೆ ಭಗವದ್ದರ್ಶನ ಆಗಲೇಬೇಕು, ಎಂದು ಕೆಲವರೆನ್ನುತ್ತಾರೆ. ಕುಲಗುರುಗಳನ್ನು ಬಿಡಬಾರದು, ಬಿಟ್ಟರೆ ಮಹಾಪಾಪ, ಆದ್ದರಿಂದ ಕುಲಗುರುಗಳ ಚಾರಿತ್ರ್ಯ ಹೇಗೇ ಇರಲಿ, ಅದರ ವಿಚಾರ ಮಾಡದೆ ಅವರಿಂದ ಮಂತ್ರವನ್ನು ಪಡೆದು ಸಾಧ್ಯವಾದ ಮಟ್ಟಿಗೆ ಜಪ-ತಪಗಳನ್ನು ಮಾಡಬೇಕು ಎಂಬ ಅಭಿಪ್ರಾಯವುಳ್ಳ ಅವರು ಆ ರೀತಿಯೇ ಅನುಷ್ಠಾನವನ್ನೂ ಮಾಡುತ್ತಾ ಹೋಗುತ್ತಾರೆ.

ಇತ್ತೀಚೆಗೆ ಕೆಲವರು ಗೀತೆ, ಪುರಾಣಗಳು, ಉಪನಿಷತ್ತುಗಳು, ಯೋಗಶಾಸ್ತ್ರ ಮುಂತಾದವುಗಳನ್ನು ಅನುವಾದಗಳ ನೆರವಿನಿಂದಾಗಲಿ, ಯಾರಾದರೂ ಪಂಡಿತರ ಸಹಾಯದಿಂದಾಗಲಿ ಓದಿ ಅವುಗಳ ಅರ್ಥವನ್ನು ಸಾಧ್ಯವಾದಷ್ಟು ತಿಳಿಯುವ ಪ್ರಯತ್ನವನ್ನು ಮಾಡುತ್ತಾರೆ. ಈ ಶಾಸ್ತ್ರಗಳಿಂದ ತಮಗೆ ಹಿಡಿಸುವ ಒಂದು ಉಪಾಸನಾ ಕ್ರಮವನ್ನು ಸ್ವೀಕರಿಸಿ ಉಪಾಸನೆಯನ್ನೂ ಮಾಡುತ್ತಾರೆ. ಇಂಥವರು ಗುರುವನ್ನು ಅವಲಂಬಿಸುವುದು ಅಗತ್ಯವೆಂದು ಒಪ್ಪುವುದಿಲ್ಲ, ಅಥವಾ ಒಂದು ವೇಳೆ ಒಪ್ಪಿದರೂ ಅದು ಅನಿವಾರ್ಯವೆಂದು ಸ್ವೀಕರಿಸಲಾರರು. ಮತ್ತೆ ಕೆಲವರು ಈ ಸಂಬಂಧವಾಗಿ ವಿಶೇಷ ಚಿಂತನೆಯನ್ನೇನೂ ಮಾಡರು. ಇವರಲ್ಲಿ ಇನ್ನೂ ಕೆಲವರು ಹೇಳುವುದೇನೆಂದರೆ, ಸಿದ್ಧಗುರುವನ್ನು ಪಡೆಯಲಾಗದಿದ್ದರೆ, ಸಾಮಾನ್ಯ ಗುರುಗಳು ಇದ್ದರೂ ಇಲ್ಲದಿದ್ದರೂ ಒಂದೇ. ಸಿದ್ಧಗುರುವನ್ನು ಪಡೆದಾಗ ದೀಕ್ಷೆಯನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಧೋರಣೆ ಅವರದು. ಇವರಲ್ಲಿ ಕೆಲವರು ಸಾಧುಸಂಗವನ್ನು ಮಾಡುತ್ತಾರೆ, ಕೆಲವರು ವಿಶೇಷವಾಗಿ ಏನನ್ನೂ ಮಾಡುವುದಿಲ್ಲ.

ಭಗವಂತನು ಅಂತರ್ಯಾಮಿ, ಅವನು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ, ನಮ್ಮ ಅಗತ್ಯಗಳನ್ನು ಪೂರೈಸುತ್ತಾನೆ, ಬಾಹ್ಯಗುರುವಿನ

**ಶೀರ್ಷಿಕೆಯ ಚಿತ್ರ**

ಗುರುವು ಜ್ಞಾನಸೂರ್ಯನನ್ನು ಕವಿದಿರುವ ಅಜ್ಞಾನದ ಕಾರ್ಮೋಡಗಳನ್ನು ಸರಿಸುತ್ತಾನೆ.

ಅಗತ್ಯವಾದರೂ ಏನು?– ಇದು ಕೆಲವರ ಮತ. ಇವರ ವಿರುದ್ಧ ಮತಾವಲಂಬಿಗಳು, ಗುರುವಿನ ವಿನಾ ಏನನ್ನೂ ಸಾಧಿಸಲಾಗದು, ಸಿದ್ಧಗುರುಗಳು ಅತ್ಯಾವಶ್ಯಕ ಎನ್ನುತ್ತಾರೆ. ಕುಲಗುರುಗಳಿಂದ ದೀಕ್ಷೆಯನ್ನು ಪಡೆದು ಪ್ರಚಲಿತ ರೀತಿಯಲ್ಲಿ ಸಾಧನೆ-ಭಜನೆಗಳನ್ನು ಮಾಡುತ್ತಿರುವವರನ್ನು ಗಮನಿಸಿದರೆ ನಮಗೆ ತಿಳಿದು ಬರುವುದೇನೆಂದರೆ, ಗುರುಗಳು ಉಪದೇಶಿಸಿದಂತೆಯೇ ಅವರು ಸಾಧನೆ ಮಾಡುತ್ತಿರುತ್ತಾರೆ; ಆದರೆ ತಮ್ಮಲ್ಲಿ ಏನಾದರೂ ಉನ್ನತಿಯಾಗುತ್ತಿದೆಯೇ ಇಲ್ಲವೇ ಎಂಬುದು ಅವರಿಗೆ ತಿಳಿಯುತ್ತಿಲ್ಲ. ಮನಸ್ಸಿನಲ್ಲಿ ಅಶಾಂತಿ ಕಳೆದಿದೆಯೆ? ಅದೂ ಇಲ್ಲ. ವಾಸ್ತವಿಕವಾಗಿ, ದಿನ ಕಳೆದಂತೆ ಈಶ್ವರಾನುರಾಗವು ವೃದ್ಧಿಯಾಗುತ್ತಲೂ ಇಲ್ಲವೆಂಬುದನ್ನು ಕಾಣುತ್ತೇವೆ; ಸಂಸಾರದ ಕಾಮಕಾಂಚನಗಳಲ್ಲಿ ಅವರಿಗಿರುವ ಅನುರಾಗದ ಒಂದು ತೃಣವಾದರೂ ಭಗವಂತನಲ್ಲಿ ಅವರಿಗಿರುವುದಿಲ್ಲ.

**ಕದಿಯುವುದನ್ನು ಕಲಿಯಬೇಕಾದರೂ ಒಬ್ಬನಿಗೆ ಗುರು ಬೇಕು. ಮತ್ತೆ, ಈ ಬ್ರಹ್ಮವಿದ್ಯೆಯನ್ನು ಪಡೆಯಲು ಗುರು ಬೇಡವೇ ?**

**– ಸ್ವಾಮಿ ಬ್ರಹ್ಮಾನಂದ**

ಹೀಗೆ ನಾನಾವಿಧದ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ, ಮುಕ್ತಿಲಾಭ ಹಾಗೂ ಧರ್ಮಜೀವನದ ಲಾಭವನ್ನು ಪಡೆಯಲು ಗುರುಗಳ ಅಗತ್ಯವೇನಾದರೂ ಇದೆಯೇ ಎಂಬ ಪ್ರಶ್ನೆ ಏಳುತ್ತದೆ. ಅಗತ್ಯವಿದೆ ಎಂದರೆ, ಈ ಅವಶ್ಯಕತೆಯು ಅನಿವಾರ್ಯವೆ? ಅರ್ಥಾತ್ ಗುರುಗಳಿಂದ ದೀಕ್ಷೆಯನ್ನು ಪಡೆಯದಿದ್ದರೆ ಮುಕ್ತಿಲಾಭವು ಅಸಂಭವವೆ? ಹಾಗೂ ಗುರುಗಳು ಯಾವ ಲಕ್ಷಣಗಳನ್ನು ಹೊಂದಿದವರಾಗಿರಬೇಕು?

ಈ ಪ್ರಶ್ನೆಗಳಿಗೆ ಉತ್ತರಿಸಲು ಯುಕ್ತಿ, ಶಾಸ್ತ್ರಗಳು ಹಾಗೂ ಮಹಾಪುರುಷ ವಾಕ್ಯ—ಈ ಮೂರನ್ನೂ ಅವಲಂಬಿಸಬೇಕು.

## ಯುಕ್ತಿಪ್ರಮಾಣ

ಮೊದಲನೆಯದಾಗಿ ಈ ವಿಚಾರದಲ್ಲಿ ಯುಕ್ತಿ ಏನು ಹೇಳುತ್ತದೆಂದು ನೋಡೋಣ. ಸಾಮಾನ್ಯ ಚಿಂತನೆಯನ್ನು ಮಾಡುವವರಿಗೆ ತಿಳಿಯುತ್ತದೇನೆಂದರೆ ಈಶ್ವರೋಪಾಸನೆಯನ್ನು ಅಥವಾ ಸಾಧನೆ ಭಜನೆಗಳನ್ನು ನಾವೇ ಮಾಡಬೇಕು ಎಂಬುದು ನಿಜ. ಆದರೆ ಜನ್ಮ ತಳೆದಾಕ್ಷಣವೆ ಯಾವುದೊ ನಿರ್ಜನ ಪ್ರದೇಶಕ್ಕೆ ಹೋಗಿ ಭಗವಂತನ ಚಿಂತನೆಯಲ್ಲಿ ಮಗ್ನರಾದವರು ಯಾರೂ ಇಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಏಕೆಂದರೆ ಶಾಸ್ತ್ರ ಹಾಗೂ ಅನೇಕ ಪುಸ್ತಕಗಳನ್ನೋದಿ ಅಥವಾ ಇತರರಿಂದ ಅನೇಕ ವಿಷಯಗಳನ್ನು ಕೇಳಿ ಭಗವಂತ ಹಾಗೂ ಧರ್ಮದ ಸಂಬಂಧವಾಗಿ ಸ್ವಲ್ಪ ತಿಳಿವಳಿಕೆಯುಂಟಾಗುವುದು. ಅನಂತರ ಸಾಧನೆಯಲ್ಲಿ ಅಭಿರುಚಿಯುಂಟಾಗುವುದು. ಯಾರು ಗುರುವಿನ ಆವಶ್ಯಕತೆಯ ಬಗ್ಗೆ ಸಂದೇಹಪಡುತ್ತಾರೊ ಬಹುಶಃ ಅವರು ಈ ವಿಚಾರವನ್ನು ತಿಳಿದಿಲ್ಲ: ಅದೇನೆಂದರೆ ಸಾಧುಸಂಗದಲ್ಲಿ ಬಹಳ ಸಮಯವನ್ನು ಕಳೆದರೆ, ಅವರ ಉದಾಹರಣೆಯನ್ನನುಸರಿಸಿದರೆ ಬಹಳವೇ ಉನ್ನತಿಯಾಗುತ್ತದೆ. ಭಗವದುಪಾಸನೆಯಲ್ಲಿ ಅವರಿಗಿರುವ ಅನುರಾಗ, ಅವರ ಪರೋಪಕಾರ, ವ್ರತನಿಷ್ಠೆ ಮುಂತಾದ ಸದ್ಗುಣಗಳನ್ನು ನೋಡಿ ನಾವೂ ಈ ಸಕಲಗುಣಸಂಪನ್ನರಾಗುವ ಇಚ್ಛೆಯಾಗುತ್ತದೆ.

ಯಾವ ವಿದ್ಯೆಯನ್ನು ಕಲಿಯಲೇ ಆಗಲಿ, ಅದನ್ನು ಕಲಿಸುವ ಶಿಕ್ಷಕನೊಬ್ಬನಿರಬೇಕು. ಇತರರ ಯಾವುದೇ ಸಹಾಯವಿಲ್ಲದೆ ಶಿಕ್ಷಣವನ್ನು ಪಡೆಯಲಾಗದು ಎಂದೇನೂ ಇಲ್ಲ. ಆದರೆ ಅದರಿಂದ ಬಹಳ ವಿಳಂಬವಾಗುತ್ತದೆ, ಅಲ್ಲದೆ, ಅನೇಕ ಕಷ್ಟಗಳನ್ನೂ ಅಡ್ಡಿ ಆತಂಕಗಳನ್ನೂ ಎದುರಿಸಬೇಕಾಗುವುದು. ಯಾವುದೇ ವಿದ್ಯೆಯನ್ನು ಕಲಿಯಲೂ ಅನುಸರಿಸಬೇಕಾದ ನಿಯಮವೆಂದರೆ—ನಮ್ಮ ಪೂರ್ವಜರು ಅರ್ಜನೆ ಮಾಡಿದ ವಿದ್ಯೆಯನ್ನು ಉಪಯೋಗಿಸಿಕೊಳ್ಳುವುದಲ್ಲದೆ ನಾವೂ ಸ್ವತಃ ಸಾಧ್ಯವಾದಷ್ಟೂ ವಿದ್ಯೆಯನ್ನು ಗಳಿಸಲು ಪ್ರಯತ್ನಿಸುವುದು. ಇತರರಿಂದ ವಿದ್ಯೆಯನ್ನು ಕಲಿಯುವುದೆಂದರೆ ಕೇವಲ ವಿಷಯ ಸಂಗ್ರಹಣೆ ಮಾಡಿ ಅದನ್ನೇ ಮೆಲಕು ಹಾಕುವುದಲ್ಲ. ಇದಕ್ಕೂ ಪುರುಷಕಾರದ ಆವಶ್ಯಕತೆ ಬಹಳಷ್ಟಿದೆ. ಇತರರಿಂದ ಶಿಕ್ಷಣವನ್ನು ಪಡೆಯುವುದು ಎಂದರೆ ಕಲಿತದ್ದನ್ನು ಕರಗತ ಮಾಡಿಕೊಳ್ಳುವುದು. ಆಧ್ಯಾತ್ಮಿಕ ಗುರುವಿನ ವಿಚಾರದಲ್ಲೂ ಇದು ಅಕ್ಷರಶಃ ಸತ್ಯ. ವಿಶೇಷ ಉನ್ನತಿಯನ್ನು ಪಡೆದ ಮಹಾಪುರುಷರ ಆಧ್ಯಾತ್ಮಿಕ ವಿಚಾರಗಳನ್ನು ಅನುಸರಿಸಿದರೆ ಅವರಿಗೆ ಉಪಲಬ್ಧವಾದ ಸತ್ಯಗಳನ್ನು ಅನಾಯಾಸವಾಗಿ ತನ್ನ ಸ್ವಂತ ಜೀವನದಲ್ಲಿ ಅಳವಡಿಸಿಕೊಳ್ಳಲು ಸುಲಭವಾಗುತ್ತದೆ.

ಅದಲ್ಲದೆ ನಿಜವಾದ ಉನ್ನತ ಗುರುವಿಗೆ ಒಂದು ವಿಶೇಷ ಶಕ್ತಿಯಿರುತ್ತದ; ಅದೇನೆಂದರೆ ಅವರು ಶಿಷ್ಯನ ಆಧ್ಯಾತ್ಮಿಕ ಪ್ರಕೃತಿಯನ್ನು ಅತಿ ಸ್ಪಷ್ಟವಾಗಿ ತಿಳಿಯಬಲ್ಲರು. ಇದನ್ನು ತಿಳಿದು ಅವನು ಯಾವ ದಾರಿಯಲ್ಲಿ ನಡೆದರೆ ಸಹಜವಾಗಿಯೇ ಮುಕ್ತಿ ಅಥವ ಭಗವತ್ಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವೊ ಅದನ್ನು ತಿಳಿಸಿಕೊಡುತ್ತಾರೆ. ಸರ್ವದಾ ಗುರುಸಂಗದಲ್ಲಿರುವ ಅದೃಷ್ಟವು ಶಿಷ್ಯನಿಗಿದ್ದರೆ, ಆಗ ಸಾಧನಕಾಲದಲ್ಲಿ ಬರುವ ನಾನಾರೀತಿಯ ವಿಘ್ನಗಳನ್ನು ಬಗೆಹರಿಸುವ ಉಪಾಯವನ್ನು ಶಿಷ್ಯನಿಗೆ ತಿಳಿಸಿಕೊಟ್ಟು ಅವನ ಸಾಧನೆಯ ಉನ್ನತಿಗನುಗುಣವಾಗಿ ಉಚ್ಚಶಿಕ್ಷಣವನ್ನು ಕೊಡುತ್ತ ಗುರಿ ತಲುಪುವವರೆಗೂ ಸಹಾಯ ಮಾಡುತ್ತಾರೆ. ನಿಜವಾದ ಗುರುವನ್ನು ಪಡೆದು ಕೃತಾರ್ಥರಾದವರೆಲ್ಲರ ಮತವೆಂದರೆ, ಸದ್ಗುರುಗಳು ಮಂತ್ರನೀಡುವುದಕ್ಕೂ ಸಾಧಾರಣ ಕುಲಗುರುಗಳು ಮಂತ್ರ ನೀಡುವುದಕ್ಕೂ ತುಂಬ ವ್ಯತ್ಯಾಸವಿದೆ. ಸದ್ಗುರುಗಳು ಮಂತ್ರನೀಡುವ ಸಮಯದಲ್ಲಿ ತಾವು ಕೊಡುವ ಮಂತ್ರದೊಂದಿಗೆ ಒಂದು ವಿಶೇಷವಾದ ಆಧ್ಯಾತ್ಮಿಕ ಶಕ್ತಿಯನ್ನೂ ನೀಡುತ್ತಾರೆ, ಹಾಗೂ ಅವರು ಕೊಡುವ ಮಂತ್ರವೂ ಸಾಧಕನ ಮನೋಭಾವಕ್ಕೆ ಅನುಗುಣವಾಗಿ ಇರುತ್ತದೆ. ಇದರಿಂದಾಗಿ ಸಾಧಾರಣವಾಗಿ ಬೇಕಾಗುವುದಕ್ಕಿಂತ ಕಡಿಮೆ ಪ್ರಯತ್ನ ಹಾಗೂ ಕಡಿಮೆ ಸಾಧನೆಯಿಂದಲೇ ಶಿಷ್ಯನು ಗುರಿ ಮುಟ್ಟುತ್ತಾನೆ.

ಸದ್ಗುರುಗಳು ಶಿಷ್ಯರಿಗೆ ಮತ್ತೊಂದು ಉಪಕಾರವನ್ನು ಮಾಡುತ್ತಾರೆ. ಅದೇನೆಂದರೆ, ಶಿಷ್ಯರ ಭಾವವನ್ನವರು ಗ್ರಹಿಸುತ್ತಾರೆ. ಅರ್ಥಾತ್, ಶಿಷ್ಯರು ದಾರಿತಪ್ಪಿದರೂ ಪುನಃ ಅವರು ಸತ್ಪಥಕ್ಕೆ ಹಿಂದಿರುಗುವಂತೆ ಮಾಡಲು ಲೌಕಿಕ ಹಾಗೂ ಅಲೌಕಿಕವಾದ ನಾನಾ ವಿಧಾನಗಳನ್ನು ಅವಲಂಬಿಸುತ್ತಾರೆ. ಯಾವುದೇ ಸಾಧಕನು ಈ ರೀತಿ ಗುರುವು ಉಪದೇಶಿಸಿದ ತತ್ತ್ವದ ಸಂಪೂರ್ಣ ಉಪಲಬ್ಧಿಯನ್ನು ಪಡೆದಿದ್ದು ಅದಕ್ಕಿಂತಲೂ ಉಚ್ಚ ತತ್ತ್ವಾನ್ವೇಷಣೆಯಲ್ಲಿ ತೊಡಗಿದರೆ ಆಗ ಅವನು ಬೇರೆ ಉನ್ನತ ಗುರುಗಳನ್ನು ಅವಲಂಬಿಸಬಹುದು. ಆದರೆ ಶಿಷ್ಯನು ಅಷ್ಟು ಉನ್ನತ ಮಟ್ಟದವನಾಗಿರದಿದ್ದರೆ ಒಬ್ಬ ಗುರುವಿನಲ್ಲೇ ನಿಷ್ಠೆಯಿಡುವುದು ಶ್ರೇಯಸ್ಕರ; ಇಲ್ಲದಿದ್ದರೆ ಅವನು ತನ್ನ ಭಾವವನ್ನು ಸರಿಯಾಗಿ ಇಟ್ಟುಕೊಳ್ಳಲಾರ. ಗುರುವಾಜ್ಞೆಯನ್ನು ಪಾಲಿಸುವುದರ ಬಗ್ಗೆ ಹೇಳುವುದೇನೆಂದರೆ, ಸದ್ಗುರುವು ಎಂದಿಗೂ ಯಾವ ತಪ್ಪು ಆಜ್ಞೆಯನ್ನೂ ಮಾಡುವುದಿಲ್ಲ. ಆದರೆ ಯಾರನ್ನೇ ಆಗಲಿ ಸದ್ಗುರುವೆಂದು ಸ್ವೀಕರಿಸುವ ಮುನ್ನ ಅನೇಕ ದಿನಗಳು ಅವರನ್ನು ಪರೀಕ್ಷಿಸಬೇಕು. ಹಾಗೆ ಮಾಡದೆ ಮನಸ್ಸಿಗೆ ತೋರಿದಾಕ್ಷಣ ಯಾರೆಂದರೆ ಅವರನ್ನು ಸದ್ಗುರುವೆಂದು ಸ್ವೀಕರಿಸುವುದು ಸಮ್ಮತವಲ್ಲ. ಸದ್ಗುರುವನ್ನು ಪಡೆಯಲಿಚ್ಛಿಸುವವರು ಇವರು ನಿಜವಾದ ಸಾಧು ಎಂಬ ವಿಶ್ವಾಸವುಂಟಾಗುವವರೆಗೂ ಹಗಲು-ರಾತ್ರಿ ಅವರೊಡನಿದ್ದುಕೊಂಡು ಅವರ ಚಾರಿತ್ರ್ಯವನ್ನು ಪರೀಕ್ಷಿಸತಕ್ಕದ್ದು.

ಚಾರಿತ್ರ್ಯದ ದೃಷ್ಟಿಯಿಂದ ಯಾವ ವ್ಯಕ್ತಿಯನ್ನೇ ಆಗಲಿ ಕಾಮಕ್ರೋಧಾದಿಗಳಿಲ್ಲದವನು, ಮಹಾಭಕ್ತ, ಮಹಾಜ್ಞಾನಿ, ನಿರ್ಲೋಭಿ ಎಂದು ತಿಳಿಯುವ ಸಾಮರ್ಥ್ಯ ನಿಮಗಿಲ್ಲದಿದ್ದರೆ, ಏಕಾಂತದಲ್ಲಿ ಕುಳಿತು ಕರಜೋಡಿಸಿ, **"ಹೇ ದೇವರೇ, ನನಗೆ ಒಳಿತು-ಕೆಡಕು, ಸರಿ-ತಪ್ಪು, ಸತ್ಯ-ಅಸತ್ಯಗಳನ್ನು ತಿಳಿಯುವ ಶಕ್ತಿಯನ್ನು ಕರುಣಿಸು,"** ಎಂದು ಭಗವಂತನಲ್ಲಿ ಪ್ರಾರ್ಥಿಸಿ. ಸದ್ಗುರುವನ್ನು ಸಾಧ್ಯವಾದಷ್ಟು ಪರೀಕ್ಷಿಸದೇ ಸದ್ಗುರುವೆಂದು ನಿರ್ಧರಿಸಿ ಅನೇಕರು ಮೋಸ ಹೋಗುತ್ತಾರೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಕುಲಗುರುವಿನಿಂದ ಮಂತ್ರ ಪಡೆದು ಯಾರಿಗೆ ಯಾವ ಪ್ರಯೋಜನವೂ ಆಗುತ್ತಿಲ್ಲವೊ, ಅವರಿಗೆ ಭಗವತ್ಸಾಕ್ಷಾತ್ಕಾರದಲ್ಲಿ ನಿಜವಾದ ಆಸಕ್ತಿಯಿದ್ದರೆ ಅಂಥವರು ಅನಾಯಾಸವಾಗಿ ಸದ್ಗುರುಗಳನ್ನು ಅವಲಂಬಿಸಬಹುದು. ಯಾರಾದರೂ ಸದ್ಗುರುಗಳಿಂದ ದೀಕ್ಷೆಯನ್ನು ಪಡೆದಮೇಲೆ, ಸದ್ಗುರುಗಳ ಮೃತ್ಯುವಿನಿಂದಲೇ ಆಗಲಿ ಅಥವಾ ಗುರುವಿನಿಂದ ಬಹುದೂರ ವಾಸಿಸುವುದರಿಂದಲೇ ಆಗಲಿ ಅಥವಾ ಬೇರೆ ಕಾರಣಗಳಿಂದಲೇ ಆಗಲಿ, ಅವರ ಸಂಗ ಸಿಗದಿದ್ದರೆ ಆಗ ಅಂಥವರು ಗುರುಗಳು ಉಪದೇಶಿಸಿದ ಸಾಧನಕ್ರಮವನ್ನು ಬಿಡದೆ, ಅವಶ್ಯವೆನಿಸಿದರೆ, ಬೇರೊಬ್ಬ ಮಹಾಪುರುಷರಿಂದ ಮಾರ್ಗದರ್ಶನವನ್ನು ಪಡೆಯಬಹುದು. ಇದರಿಂದೇನೂ ತೊಂದರೆಯಿಲ್ಲ. ಅವಧೂತನಿಗೆ ೨೪ ಉಪಗುರುಗಳಿದ್ದರೆಂದು ಹೇಳಲಾಗಿದೆ.

## ಶಾಸ್ತ್ರಪ್ರಮಾಣ

ಇನ್ನು ಈ ವಿಷಯವಾಗಿ ಶಾಸ್ತ್ರಗಳೇನೆನ್ನುತ್ತವೆಂದು ನೋಡೋಣ. ಸರ್ವಪ್ರಮಾಣಗಳ ಮೂಲವಾದ ಶ್ರುತಿಯಿಂದ ಎರಡು ಮೂರು ಮಾತುಗಳನ್ನು ಹೇಳುತ್ತೇನೆ.

**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ।**
**ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥**

"ಭಗವಂತನನ್ನು ತಿಳಿಯಲು ಸಮಿಧ ಅರ್ಥಾತ್ ಯಜ್ಞಕಾಷ್ಠವನ್ನು ಕೈಯಲ್ಲಿ ತೆಗೆದುಕೊಂಡು ವೇದಗಳನ್ನರಿತ ಬ್ರಹ್ಮನಿಷ್ಠ ಗುರುವಿನ ಬಳಿ ಸಾರಬೇಕು." ಆಚಾರ್ಯವಾನ್ ಪುರುಷೋ ವೇದ —"ಯಾರು ಗುರುವನ್ನು ಆಶ್ರಯಿಸುವರೊ ಅವರಿಗೆ ಜ್ಞಾನವು ಲಭ್ಯವಾಗುವುದು." ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ—"ಪರಮಾತ್ಮನ ತತ್ತ್ವವನ್ನು ತಿಳಿಸಿಕೊಡುವವರು ಹಾಗೂ ತಿಳಿದುಕೊಳ್ಳುವವರು ಇಬ್ಬರೂ ಅಲೌಕಿಕ ಗುಣಶಾಲಿಗಳಾಗಿರುವುದು ಆವಶ್ಯಕ." ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ— "ಹೀನ ಆಚಾರ್ಯರಿಂದ ಹೇಳಲ್ಪಟ್ಟರೆ ಬಹುಮಟ್ಟಿನ ಚಿಂತನೆಯನ್ನು ಮಾಡಿದರೂ ಕೂಡ ಆತನನ್ನು ಚೆನ್ನಾಗಿ ತಿಳಿದುಕೊಳ್ಳಲಾಗುವುದಿಲ್ಲ." ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ।ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶ್ಯಂತೇ ಮಹಾತ್ಮನಃ॥ —"ಪರಮಾತ್ಮನಲ್ಲಿ ಅಗಾಧವಾದ ಭಕ್ತಿ, ಹಾಗೂ ಪರಮಾತ್ಮನ ಮೇಲಿನ ಭಕ್ತಿಯಂತೆಯೇ ಗುರುಭಕ್ತಿ ಕೂಡ ಇದ್ದರೆ, ಅಂತಹ ಮಹಾತ್ಮನ ಹೃದಯದಲ್ಲಿ ಈ ತತ್ತ್ವಗಳು ಪ್ರಕಾಶಿತವಾಗುತ್ತವೆ." ಹೀಗೆ ಅನೇಕ ತರಹದ ಶ್ರುತಿಪ್ರಮಾಣಗಳಿವೆ.

ತಂತ್ರಗಳಲ್ಲಿಯೂ ಸದ್ಗುರುವಿಗೆ ಸಂಬಂಧಿಸಿದಂತೆ ಅಸಂಖ್ಯ ಪ್ರಮಾಣಗಳಿವೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯ. ನಿಜವಾದ ಗುರುವಿನ ಲಕ್ಷಣ, ನಿಷಿದ್ಧ ಗುರುವಿನ ಸ್ವಭಾವ ಮುಂತಾದುವುಗಳನ್ನು ಬಹಳ ಸುಂದರವಾಗಿ ತಂತ್ರಶಾಸ್ತ್ರದಲ್ಲಿ ಚರ್ಚಿಸಲಾಗಿದೆ. ಅವುಗಳೆಲ್ಲದರ ಒಟ್ಟು ತಾತ್ಪರ್ಯ ಇಷ್ಟೆ : ಸದ್ಗುರುವನ್ನಾಶ್ರಯಿಸಿ ಸಾಧನೆ ಮಾಡಿದರೆ, ಸಿದ್ಧಿಯನ್ನು ಪಡೆಯಬಹುದು. ಕುಲಗುರುಗಳು ಹೇಗೇ ಇರಲಿ, ಅವರಿಂದ ದೀಕ್ಷೆಯನ್ನು ಪಡೆಯುವುದು ಸರಿಯೆಂದು ಕೆಲವು ಶಾಸ್ತ್ರವಾಕ್ಯಗಳು ಹೇಳುತ್ತವೆ. ನಿಜವಾದ ಗುರುಗಳ ಅವನತಿಯ ನಂತರ ಸ್ವಾರ್ಥಪರ ಗುರುಗಳಿಗೆ ಸಂಬಂಧಿಸಿದ ಈ ಶಾಸ್ತ್ರವಾಕ್ಯಗಳು ಪ್ರಕ್ಷಿಪ್ತ ಭಾಗಗಳು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಧರ್ಮ ಎಂದೂ ಸಾಮಾಜಿಕ ಅಥವಾ ಲೌಕಿಕ ವ್ಯಾಪಾರವಲ್ಲ. ಕುಲಗುರು ಅರ್ಥಾತ್ ನನ್ನ ಪೂರ್ವಿಕರ ಗುರುಗಳಾಗಿದ್ದವರನ್ನು ನಾನು ಗೌರವಿಸಬಹುದು, ನನಗೆ ಸಾಮರ್ಥ್ಯವಿದ್ದರೆ ಅವರಿಗೆ ನಾನು ಸಾಧ್ಯವಾದಷ್ಟು ಅರ್ಥದಾನವನ್ನೂ ಮಾಡಬಹುದು. ಆದರೆ ನನ್ನ ಹೃದಯದಲ್ಲಿ"ಹೇ ಭಗವಂತ, ನಿನ್ನನ್ನು ನಾನು ಹೇಗೆ ತಾನೆ ಪಡೆಯಲಿ?" ಎಂಬ ವ್ಯಾಕುಲತೆ ಜಾಗೃತವಾದಾಗ, ನಾನು ಆ ವ್ಯಾಕುಲತೆಯನ್ನು ತೃಪ್ತಿಪಡಿಸುವಲ್ಲಿಗೆ ಹೋಗಬೇಕೇ ಹೊರತು ಮತ್ತಿನ್ನೆಲ್ಲಿಗೂ ಅಲ್ಲ. ಯಾರ ಬಳಿಸಾರಿದರೆ ಪಿಪಾಸೆಯು ನೀಗುತ್ತದೊ ಅವರನ್ನು ಬಿಟ್ಟು ನೀರಿಗಾಗಿ ಇನ್ನೆಲ್ಲಿ ಹುಡುಕುವುದು?

## ಮಹಾಪುರುಷರ ಪ್ರಮಾಣ

ಮಹಾಪುರುಷರನ್ನು ಕೇಳಿದರೆ ಅವರೂ, ತಾವು ಬ್ರಹ್ಮನನ್ನು ತಿಳಿದ ಗುರುವಿನ ಬಳಿಸಾರಿ ಅವರು ಉಪದೇಶಿಸಿದ ಸಾಧನ ಕ್ರಮವನ್ನನುಸರಿಸಿ, ಹೆಚ್ಚೆ ಹೆಚ್ಚೆಗೂ ಅನೇಕ ವಿಷಮ ಪರೀಕ್ಷೆಗಳಿಗೆ

ಒಳಗಾಗಿ, ಕೊನೆಗೆ ಈ ಸ್ಥಿತಿಯನ್ನು ಮುಟ್ಟಿರುವುದಾಗಿ ತಿಳಿಸುತ್ತಾರೆ. ನಿಮಗೆ ನಿಜವಾಗಿಯೂ ಉನ್ನತಿಗೇರುವ ಆಸೆ ಇದ್ದದ್ದೇ ಆದರೆ ನೀವೂ ಕೂಡ ಇದೇ ಕ್ರಮವನ್ನನುಸರಿಸಿ ಮುಂದುವರಿಯಬೇಕು. ಎಲ್ಲಿಯೇ ಆಗಲಿ ಯಾವುದೇ ರೀತಿಯ ಅಲೌಕಿಕ ಧರ್ಮವಿಕಸನ ವಾಗುತ್ತಿದ್ದರೆ, ಅದರ ಹಿನ್ನೆಲೆಯಲ್ಲಿ ಮಹಾಪುರುಷರೊಬ್ಬರು ಗುರುರೂಪದಲ್ಲಿ ನಿಂತಿರುವುದು ಕಂಡುಬರುತ್ತದೆ. ಆಡುಭಾಷೆಯಲ್ಲಿ ಜನರೆನ್ನುತ್ತಾರೆ, "ಈ ವ್ಯಕ್ತಿಗೆ ಗುರುಬಲವಿದೆ" ಎಂದು. "ಭಗ ವಂತನು ಇದ್ದಾನೆ" ಎಂದು ಶಾಸ್ತ್ರಗಳೆನ್ನುತ್ತವೆ, ಜನರೂ ಹೇಳುತ್ತಾರೆ. ಆದರೆ ಸದ್ಗುರುವು "ನಾನು ಭಗವಂತನನ್ನು ಕಂಡಿದ್ದೇನೆ" ಎನ್ನುತ್ತಾರೆ. ಆತನನ್ನು ಕಾಣುವ ಮಾರ್ಗವನ್ನು ಶಿಷ್ಯನಿಗೂ ತೋರುತ್ತಾರೆ ಹಾಗೂ ಅದೇ ಪಥದಲ್ಲಿ ಅವನನ್ನು ನಿಧಾನವಾಗಿ ಮುನ್ನಡೆಸುತ್ತಾರೆ. ನಿಜ ವಾದ ಗುರುವಿನ ದರ್ಶನಮಾತ್ರದಿಂದಲೆ ಅವರ ಮೇಲೆ ಸ್ವಾಭಾವಿಕ ವಾಗಿಯೇ ನಮ್ಮಲ್ಲಿ ಶ್ರದ್ಧೆಯುಂಟಾಗುತ್ತದೆ. ಅವರು ಯಾವುದೊ ಒಂದು ಅಲೌಕಿಕ ಆನಂದವನ್ನು ಆಸ್ವಾದಿಸುತ್ತಾ ಅದರಲ್ಲಿ ತಲ್ಲೀನ ರಾಗಿರುವುದನ್ನೂ, ದಿನದಿಂದ ದಿನಕ್ಕೆ ಇನ್ನೂ ಹೆಚ್ಚಾಗಿ ಅದರಲ್ಲೇ ನಿಮಗ್ನರಾಗುತ್ತಿರುವುದನ್ನೂ ಕಾಣುತ್ತೇವೆ. ಅವರನ್ನು ಸಮೀಪಿಸುತ್ತಲೇ ಸಂಸಾರದ ಎಲ್ಲ ದುಃಖ ನೋವುಗಳೂ ಕಳೆದುಹೋಗುತ್ತವೆ. ಮನಸ್ಸಿನಲ್ಲಿ ಇನ್ನು ಸಂಸಾರದ ಲೇಶಮಾತ್ರವೂ ಇಲ್ಲ ಎಂದು ತೋರುತ್ತದೆ. ಅವರ ಪವಿತ್ರ ಸ್ಪರ್ಶದಿಂದ ನಿದ್ರೆಗೈದ ಬ್ರಹ್ಮಶಕ್ತಿಯು ಜಾಗೃತವಾಗಿ ಸಾಧಕನು ಎಲ್ಲೆಡೆಯೂ ಆನಂದ ಸಾಗರವನ್ನೇ ಕಾಣುತ್ತಾನೆ.

> ನಾವು ಆನಂದದಲ್ಲಿದ್ದಾಗ ಅದೇ ಆನಂದವನ್ನು ಇತರರಿಗೆ ವರ್ಗಾಯಿಸಬಹುದು. ಅದೇ ರೀತಿ ಉತ್ತಮಗುರು ತನ್ನ ಶಿಷ್ಯನಿಗೆ ಆಧ್ಯಾತ್ಮಿಕ ಸ್ಪಂದನವನ್ನು ವರ್ಗಾಯಿಸಬಲ್ಲ.
>
> *ಸ್ವಾಮಿ ಯತೀಶ್ವರಾನಂದ*

## ಸಾಮಾನ್ಯ ಗುರು ಮತ್ತು ಸದ್ಗುರು

ಪ್ರಪಂಚದಲ್ಲಿ ಅನೇಕ ಗುರುಗಳನ್ನು ನೋಡಿದ್ದೇನೆ, ಅವರಿಂದ ಉಪದೇಶವನ್ನೂ ಪಡೆದಿದ್ದೇನೆ. ಆದರೆ ಎಲ್ಲವೂ ನಿಷ್ಪ್ರಯೋಜಕ. ಕಾರಣ, ಅವರಲ್ಲಿ ಬ್ರಹ್ಮಜ್ಞಾನಿಗಳ ಯಾವ ಲಕ್ಷಣವೂ ಇಲ್ಲ. ಅವರ ಸಂಸಾರಾಸಕ್ತಿ ಇನ್ನೂ ಕಳೆದಿಲ್ಲ. ಅವರಲ್ಲಿ ವಿವೇಕ ವೈರಾಗ್ಯ ಗಳು ಮೂಡಿಲ್ಲ. ಇಂತಹ ಸಾಧಾರಣ ಗುರುಗಳಿಂದ ಉಪದೇಶವನ್ನು ಪಡೆಯುವುದು ಕುರುಡನೊಬ್ಬನನ್ನು ದಾರಿ ಕೇಳಿದಷ್ಟೇ ನಿಷ್ಫಲ. ಅವರು ಕೊಡುವ ಉಪದೇಶದಲ್ಲಿ ಯಾವ ಶಕ್ತಿಯೂ ಇರುವುದಿಲ್ಲ. ಬ್ರಹ್ಮಜ್ಞಾನಿಯಾದ ಗುರುವು ಮಂತ್ರದ ಜೊತೆಯಲ್ಲಿ ಶಿಷ್ಯನಿಗೆ ನವಜೀವನವನ್ನು ಕೊಡುವಂತಹ ಶಕ್ತಿಯನ್ನು ನೀಡುತ್ತಾರೆ. ಇದನ್ನು ನಾನು ಅನುಭವಿಸಿದ್ದೇನೆ. ಅಂದಿನಿಂದ ಶಿಷ್ಯನಲ್ಲಿ ನೂತನ ವಿಶ್ವಾಸದ ಉದಯವಾಗಿ ಅವನು ನವಜೀವನವನ್ನು ಪ್ರಾರಂಭಿಸುತ್ತಾನೆ. ಸಾಧಾರಣ ಗುರುವಿನಿಂದ ಅದೆಷ್ಟು ಉಪದೇಶಗಳನ್ನು ಕೇಳಿದರೂ ಅವಾವುವೂ ಮನಸ್ಸಿನಲ್ಲಿ ಯಾವುದೇ ಪರಿಣಾಮವನ್ನೂ ಬೀರು ವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಒಂದು ಕಥೆಯಿದೆ.

ಒಬ್ಬ ರಾಜನಿಗೆ ಇದ್ದಕ್ಕಿದ್ದಂತೆ ಸಂಸಾರದಲ್ಲಿ ವೈರಾಗ್ಯ ವುಂಟಾಯಿತು. ಪರೀಕ್ಷಿತ್ ಮಹಾರಾಜನು ಏಳು ದಿನಗಳು ಭಾಗವತ ವನ್ನು ಶ್ರವಣ ಮಾಡಿ ಜ್ಞಾನಲಾಭವನ್ನು ಪಡೆದಿದ್ದನೆಂದು ಆತನು ಕೇಳಿದ್ದನು. ಹತ್ತಿರದಲ್ಲಿದ್ದ ಮೇಧಾವಿ ಪಂಡಿತನೊಬ್ಬನನ್ನು ಕರೆಸಿ ತಾನೂ ಭಾಗವತವನ್ನು ಕೇಳಲಾರಂಭಿಸಿದನು. ಎರಡು ತಿಂಗಳುಗಳು ಪ್ರತಿನಿತ್ಯವೂ ಶ್ರೀಮದ್ಭಾಗವತವನ್ನು ಕೇಳಿಯೂ ಸ್ವಲ್ಪವೂ ತತ್ತ್ವ ಜ್ಞಾನವನ್ನು ಪಡೆಯಲಾರದೆ ಹೋದಾಗ ಆತನು ಬ್ರಾಹ್ಮಣ-ಪಂಡಿತ ನನ್ನು ಕೇಳಿದನು: "ಏಳು ದಿನಗಳು ಮಾತ್ರವೇ ಶ್ರೀಮದ್ಭಾಗವತವನ್ನು ಕೇಳಿದ್ದ ಪರೀಕ್ಷಿತ್ತಿಗೆ ತತ್ತ್ವಜ್ಞಾನವುಂಟಾಯಿತು; ಎರಡು ತಿಂಗಳ

> ವ್ಯಕ್ತಿಯು ಮೊದಲು ತಾನು ನಡೆಯಬೇಕಾದ ಹಾದಿಯಲ್ಲಿ ಹೋಗಬೇಕು. ಆನಂತರವೇ ಇತರರಿಗೆ ಮಾರ್ಗದರ್ಶನ ನೀಡಬೇಕು.
>
> *ಗೌತಮಬುದ್ಧ*

ಸತತ ಶ್ರವಣದಿಂದಲೂ ನನಗೇನೂ ಆಗಲಿಲ್ಲವಲ್ಲ, ಹೀಗೇಕೆ? ಇದಕ್ಕುತ್ತರವನ್ನು ನಾಳೆಯೇ ನೀವು ಕೊಡದಿದ್ದರೆ, ನಿಮಗೆ ಸಲ್ಲ ಬೇಕಾದ ಹಣವನ್ನು ಕೊಡುವುದಿಲ್ಲ." ಬ್ರಾಹ್ಮಣನು ರಾಜನ ತೀವ್ರ ಅಸಮಾಧಾನವನ್ನು ನೋಡಿ ಖಿನ್ನಮನಸ್ಕನಾಗಿ ಮನೆಗೆ ಹಿಂದಿರು ಗಿದನು. ಅದೆಷ್ಟೇ ಚಿಂತಿಸಿದರೂ ಪ್ರಶ್ನೆಗೆ ಸೂಕ್ತವಾದ ಉತ್ತರವು ಸಿಗಲಿಲ್ಲ. ಆಗ ವಿಷಾದದಿಂದ ಗಲ್ಲದ ಮೇಲೆ ಕೈಯಿಟ್ಟುಕೊಂಡು ಚಿಂತಾಕ್ರಾಂತನಾಗಿ ಕುಳಿತನು. ಅವನಿಗೊಬ್ಬ ಬುದ್ಧಿಮತಿಯೂ ಪಿತೃ ಭಕ್ತಿಪರಾಯಣೆಯೂ ಆದ ಮಗಳಿದ್ದಳು. ತಂದೆಯು ಈ ರೀತಿ ದುಃಖಿತರಾಗಿರುವುದನ್ನು ನೋಡಿ ಮತ್ತೆ ಮತ್ತೆ ಅದಕ್ಕೆ ಕಾರಣವನ್ನು ಕೇಳಿದಾಗ ಬೇರೆ ದಾರಿ ತೋರದೆ ಅವಳಿಗೆ ತನ್ನ ದುಃಖದ ಕಾರಣ ವನ್ನು ಹೇಳಬೇಕಾಯಿತು. ಮಗಳು ನಗುತ್ತ, "ಅಪ್ಪ, ನೀವೇನೂ ಚಿಂತಿಸಬೇಡಿ. ಇದರ ಉತ್ತರವನ್ನು ನಾಳೆ ನಾನು ರಾಜನಿಗೆ ಹೇಳು ತ್ತೇನೆ" ಎಂದಳು. ಮರುದಿನ ತಂದೆಯ ಜತೆಯಲ್ಲಿ ಹುಡುಗಿಯು ರಾಜಸಭೆಗೆ ಬಂದಳು. ಬ್ರಾಹ್ಮಣನೆಂದನು: "ನನ್ನ ಮಗಳು ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾಳೆ." ಹುಡುಗಿಯೆಂದಳು: "ಪ್ರಶ್ನೆಗೆ ಉತ್ತರ ಸಿಗಬೇಕಾದರೆ ನಾನು ಹೇಳುವಂತೆ ನೀವು ಕೇಳಬೇಕು." ರಾಜನು ಒಪ್ಪಿದಾಗ ಬ್ರಾಹ್ಮಣ ಕನ್ಯೆಯು ಕಾವಲುಗಾರರ ಕಡೆ ತಿರುಗಿ ಹೇಳಿದಳು: "ಒಂದು ಕಂಬಕ್ಕೆ ನನ್ನನ್ನೂ ಮತ್ತೊಂದು ಕಂಬಕ್ಕೆ ರಾಜನನ್ನೂ ಕಟ್ಟಿಹಾಕಿರಿ." ರಾಜನು ಆದೇಶಿಸಿದಂತೆ ಕಾವಲುಗಾರರು ಹಾಗೆಯೇ ಮಾಡಿದರು. ಆಗ ಹುಡುಗಿಯು ರಾಜನನ್ನುದ್ದೇಶಿಸಿ, "ರಾಜನ್! ಬೇಗನೇ ನನ್ನನ್ನು ಈ ಬಂಧನದಿಂದ ಬಿಡಿಸಿ" ಎಂದಳು. ರಾಜನೆಂದನು "ಇದೇನು ಹೇಳುತ್ತಿರುವೆ! ಅದು ಹೇಗೆ ಸಾಧ್ಯ? ನಾನೇ ಬದ್ಧನಾಗಿರುವಾಗ ನಿನ್ನನ್ನು ಬಂಧನದಿಂದ ಬಿಡಿಸಲು ನನಗೆ ಹೇಗೆ ತಾನೆ ಆಗುತ್ತದೆ?" ಆಗ ಹುಡುಗಿಯು ನಗುತ್ತ, "ರಾಜನ್ ! ನಿಮ್ಮ ಪ್ರಶ್ನೆಗೆ ಇದೇ ಉತ್ತರ. ಪರೀಕ್ಷಿತ್

ಮಹಾರಾಜನು ಮುಮುಕ್ಷುವಾದ ಶ್ರೋತೃವು,ಹಾಗೂ ಭಾಗವತವನ್ನು ಪಠಿಸುತ್ತಿದ್ದವರು ಸರ್ವತ್ಯಾಗಿಯೂ, ಬ್ರಹ್ಮಪರಾಯಣರೂ ಮಹಾ ಜ್ಞಾನಿಯೂ ಆದ ಸಾಕ್ಷಾತ್ ಶುಕದೇವ. ಅವರಿಂದ ಭಾಗವತ ವನ್ನು ಕೇಳಿದ ಪರೀಕ್ಷಿತ್ತಿಗೆ ಜ್ಞಾನಲಾಭವಾಯಿತು. ಆದರೆ ನನ್ನ ತಂದೆ ಯವ ರಾದರೊ ಸಂಸಾರಾಸಕ್ತರು, ಹಣಕ್ಕಾಗಿ ತಮ್ಮ ಹತ್ತಿರ ಶಾಸ್ತ್ರ ಪಠಣ ವನ್ನು ಮಾಡುವವರು. ಅವರಿಂದ ಶಾಸ್ತ್ರ ಪಠಣವನ್ನು ಕೇಳಿ ನಿಮಗೆ ಜ್ಞಾನಲಾಭವಾಗುವುದಾದರೂ ಹೇಗೆ?" ಈ ಬೋಧಪ್ರದ ಕತೆಯಿಂದ ತಿಳಿಯುವುದೇನೆಂದರೆ, ಸದ್ಗುರುವಿನಿಂದ ಉಪದೇಶವನ್ನು ಪಡೆಯ ದಿದ್ದರೆ ಸಂಸಾರ ಬಂಧನದಿಂದ ಮುಕ್ತರಾಗುವುದು ಅಸಂಭವ.

**ಗುರುಶಿಷ್ಯ ಸಂಬಂಧ**

ಇದರ ಬಗ್ಗೆ ಇನ್ನೊಂದೆರಡು ಮಾತುಗಳು. ಕೆಲವರೆನ್ನುತ್ತಾರೆ ಶಿಷ್ಯನು ಹೇಗೇ ಇರಲಿ, ಸದ್ಗುರು ಪ್ರಾಪ್ತರಾದರೆ ಅವನಿಗೆ ಮುಕ್ತಿ ಖಂಡಿತ. ಇನ್ನೂ ಕೆಲವರು ಹೇಳುತ್ತಾರೆ, ಗುರುವು ಎಂಥವರೇ ಆಗಿರಲಿ, ಶಿಷ್ಯನಿಗೆ ವಿಶ್ವಾಸ, ಭಕ್ತಿ ಹಾಗೂ ಶ್ರದ್ಧೆಗಳಿದ್ದರೆ ಮುಕ್ತಿ ಖಚಿತ. ಇವೆರಡು ಮತಗಳನ್ನು ನಾವು ಖಡಾಖಡಿಯಾಗಿ ತಿರಸ್ಕರಿಸುವುದಿಲ್ಲ. ವಾಸ್ತವಿಕವಾಗಿ ಜಗತ್ತಿನಲ್ಲಿ ಇಂತಹ ಘಟನೆಗಳು ಕೆಲವೊಮ್ಮೆ ನಡೆ ಯುವುದುಂಟು. ಸಾಮಾನ್ಯವಾಗಿ ಗುರುಶಿಷ್ಯರಿಬ್ಬರಲ್ಲೂ ಆವಶ್ಯಕವಾದ ಗುಣಗಳಿರಬೇಕು. ಒಬ್ಬರೇ ಮಹಾ ಪುರುಷರ ಶಿಷ್ಯರುಗಳಲ್ಲಿ ಎಷ್ಟು ತಾರತಮ್ಯವಿದೆ ಎಂಬುದನ್ನು ನಾವು ನೋಡುತ್ತೇವೆ. ಇದು ಶಿಷ್ಯರ ಯೋಗ್ಯತೆಗನುಸಾರವಾಗಿರುತ್ತದೆ. ಶಿಷ್ಯನು ಶ್ರದ್ಧಾವಂತನೂ, ವಿನಯ ವಂತನೂ, ದೃಢತೆಯಿಂದ ಮುಂದುವರೆಯುವವನೂ ಆಗಿದ್ದರೆ, ಸುಲಭ ವಾಗಿಯೇ ಗುರೂಪದೇಶದ ತತ್ತ್ವವನ್ನು ಸಂಪೂರ್ಣವಾಗಿ ಪಡೆಯಬಲ್ಲ.

ನಮ್ಮ ದೇಶದಲ್ಲಿ ಈಗ ಅಂತಹ ಗುರುಭಕ್ತಿ ಇಲ್ಲವೆಂದೇ ಹೇಳ ಬೇಕು. ಅನೇಕರು ಇಂತಹ ಗುರುಭಕ್ತಿಯನ್ನು ಮತ್ತೆ ಎತ್ತಿ ಹಿಡಿಯುವ ನಿರ್ಧಾರವನ್ನು ಕೈಗೊಂಡಂತಿದೆ. ದೇಶದಲ್ಲಿ ಗುರುಭಕ್ತಿ ಅಳಿಸಿ ಹೋದರೆ ಶ್ರದ್ಧೆ, ವಿಶ್ವಾಸ, ನಿಷ್ಠೆ ಮುಂತಾದ ಸದ್ಗುಣಗಳು ನಶಿಸಿ ಹೋಗುತ್ತವೆ. ಸ್ವಾಧೀನತೆಯ ಹೆಸರಿನಲ್ಲಿ ಸ್ವೇಚ್ಛಾಚಾರವು ಸಮಾಜ ದಲಿ ರಾರಾಜಿಸುತ್ತದೆ. ಗುರುವನ್ನು ಸ್ವೀಕರಿಸುವ ಮುನ್ನ ಅವರನ್ನು ಪರೀಕ್ಷಿಸಬಹುದು. ಆದರೆ ಒಮ್ಮೆ ಸ್ವೀಕರಿಸಿದ ನಂತರ ಅವರ ಒಂದು ಮಾತಿಗೆ ನಿಮ್ಮ ಜೀವವನ್ನೇ ಸಮರ್ಪಿಸಲೂ ಸಿದ್ಧರಾಗಿರ ಬೇಕು. ಈ ರೀತಿ ಗುರುವನ್ನು ಅವಲಂಬಿಸಿದರೆ ನಮ್ಮ ಮನಸ್ಸು ಸ್ವಾತಂತ್ರ್ಯವನ್ನು ಕಳೆದುಕೊಂಡು ನಾವು ಕ್ರಮೇಣ ಜಡರಾಗಿ ಹೋಗುತ್ತೇವೆಂದು ಕೆಲವರ ಅನಿಸಿಕೆ. ಇಂತಹ ಸಂಶಯಕ್ಕೆ ಎಡೆ ಯಿಲ್ಲ. ವಾಸ್ತವಿಕವಾಗಿ ಸದ್ಗುರುಗಳು ಎಂದೂ ಯಾರ ಮನಸ್ಸಿನ ಸ್ವಾಧೀನತೆಯನ್ನೂ ಕಸಿದುಕೊಳ್ಳುವುದಿಲ್ಲ. ಬದಲಾಗಿ ಶಿಷ್ಯನ ಮನಸ್ಸು ಸ್ವತಂತ್ರವಾಗಿ ಆಲೋಚಿಸುವಂತೆ ಮಾಡಿ, ಅವನು ತನ್ನ ಕಾಲಿನ ಮೇಲೆ ತಾನು ನಿಲ್ಲುವಂತೆ ಅಣಿಗೊಳಿಸಿ, ಅದರ ಮೂಲಕ ತನ್ನ ಇಂದ್ರಿಯಗಳ ಬಂಧನ, ಮನಸ್ಸಿನ ಬಂಧನ, ಸಾಂಸಾರಿಕ ಬಂಧನ, ಸಾಮಾಜಿಕ ಬಂಧನಗಳನ್ನು ಕತ್ತರಿಸಿ ಮುಕ್ತಿಯೆಡೆಗೆ ನಡೆಯಲು ಉಪಯುಕ್ತ ಮಾರ್ಗದರ್ಶನವನ್ನು ನೀಡುತ್ತಾರೆ. ಜನರು ಸ್ವಲ್ಪ ಹಣಕಾಸು ಅಥವಾ ಇನ್ನಾವುದೇ ರೀತಿಯ ಭೌತಿಕ ಸಹಾಯವನ್ನು ಪಡೆದಿದ್ದರೆ, ನೀಡಿದವರಿಗೆ ಎಷ್ಟೊಂದು ಕೃತಜ್ಞ ರಾಗಿರುತ್ತಾರೆ! ಹೀಗಿರುವಾಗ ಜೀವನದ ಸಾರತತ್ತ್ವವಾದ ಪರಮ ಶ್ರೇಷ್ಠ ವಸ್ತುವನ್ನು ಪಡೆಯಲು ನೆರವನ್ನು ನೀಡುತ್ತಿರುವ ಗುರುವಿಗೆ ಇನ್ನೆಷ್ಟು ಕೃತಜ್ಞರಾಗಿರಬೇಕು! ಕೃತಜ್ಞತೆಯನ್ನು ತೋರುವುದರಲ್ಲಿ ಹಿಂದೂಗಳಿಗೆ ಸಮಾನರಾರೂ ಇಲ್ಲ. ಹಿಂದೂಗಳು ಗುರುಭಕ್ತಿ ಯನ್ನು ಮರೆತ ದಿನವೆ ಹಿಂದೂಗಳ ಹಿಂದೂತ್ವವೂ ಕಣ್ಮರೆ ಯಾಗುತ್ತದೆ. ಗುರುಭಕ್ತಿ, ಗುರುವಿನಲ್ಲಿ ಅಚಲ ಶ್ರದ್ಧೆ, ಗುರು ವಾಕ್ಯದಲ್ಲಿ ಅಪಾರ ವಿಶ್ವಾಸ—ಇವು ಒಂದು ಕಾಲದಲ್ಲಿ ಭಾರತ ವನ್ನು ಶ್ರೇಷ್ಠತೆಯ ಶಿಖರಕ್ಕೇರಿಸಿತ್ತು. ಇನ್ನೆಂದಾದರೂ ಮತ್ತೆ ಭಾರತದ ಉನ್ನತಿಯಾಗುವುದಾದರೆ, ಈ ಗುರುಭಕ್ತಿಯ ಸಹಾಯ ದಿಂದಲೇ ಆಗುವುದು. ಆತನಿಗೆ ನಮ್ಮ ಪ್ರಾಣವನ್ನೇ ಬಲಿಕೊಡ ಬೇಕಾಗಿ ಬಂದರೂ ಸರಿಯೆ, ನಾವು ಅನೇಕ ಮಹತ್ಕಾರ್ಯಗಳನ್ನು ಮಾಡಲು ಶಕ್ತರಾಗುತ್ತೇವೆ. ಬರಿಯ ಮುಕ್ತಿಯನ್ನು ಸಾಧಿಸುವುದು ಮಾತ್ರವಲ್ಲ, ದೇಶಕ್ಕಾಗಿಯೂ ನಮ್ಮ ಜನಾಂಗಕ್ಕಾಗಿಯೂ ಸ್ವಲ್ಪ ವೇನಾದರೂ ಮಾಡಿಹೋಗಲು ಸಮರ್ಥರಾಗುತ್ತೇವೆ.

☆

## ಕದಿಯುವ ಕಲೆ

ಒಬ್ಬ ಪ್ರಸಿದ್ಧ ಕಳ್ಳನಿದ್ದ. ಅವನಿಗೆ ಒಬ್ಬನೇ ಮಗ. ತಂದೆಗೆ ತುಂಬ ವಯಸ್ಸಾಗಿತ್ತು. ಆದರೂ ಮಗನಿಗೆ ತನ್ನ ಕದಿಯುವ ಕಲೆಯನ್ನು ಕಲಿಸಿರಲಿಲ್ಲ. ಮಗನಿಗೆ ಚಿಂತೆ , ತಂದೆ ಆ ಕಲೆಯನ್ನು ತನಗೆ ಕಲಿಸದೆ ತೀರಿಕೊಂಡು ಬಿಟ್ಟರೆ ತನ್ನ ಗತಿ ಏನು ಎಂದು.

ಒಂದು ದಿನ, ಕದಿಯುವ ಮಹಾಕಲೆಯನ್ನು ತನಗೆ ಕಲಿಸಿಕೊಡಬೇಕೆಂದು ತಂದೆಯನ್ನು ಕೇಳಿದ. ಅಂದು ರಾತ್ರಿ ಕದಿಯುವುದಕ್ಕೆ ಹೋಗುವಾಗ ತಂದೆ ಮಗನನ್ನು ಕರೆದುಕೊಂಡು ಹೋದ. ಒಂದು ಮನೆಗೆ ಕನ್ನಹಾಕಿ ಇಬ್ಬರೂ ಒಳಗೆ ನುಗ್ಗಿದರು. ಒಂದು ಕೋಣೆಯ ಬೀಗ ಒಡೆದು ಮಗನನ್ನು ಒಳಗೆ ಕಳಿಸಿ ಹೊರಗಡೆಯಿಂದ ಚಿಲಕ ಹಾಕಿ ತಂದೆಯು ಓಡಿಹೋದನು. ಈಗ ಮಗನು ಏನು ಮಾಡಬೇಕೆಂದು ಯೋಚಿಸತೊಡಗಿದನು. ''ಮಿಯಾಂವ್, ಮಿಯಾಂವ್'' ಎಂದು ಬೆಕ್ಕಿನ ಶಬ್ದ ಮಾಡಿದ. ಮನೆಯವರು ಎದ್ದು ಕೋಣೆಯ ಬಾಗಿಲು ತೆರೆದರು. ಕೂಡಲೇ ಇವನು ಕದ್ದ ಮಾಲನ್ನು ಎತ್ತಿಕೊಂಡು ಓಡಿದನು. ಹೊರಗೆ ಬಂದು ಅಲ್ಲಿದ್ದ ಬಾವಿಗೆ ಹತ್ತಿರದಲ್ಲಿದ್ದ ಒಂದು ದೊಡ್ಡ ಕಲ್ಲನ್ನು ಎಸೆದನು. "ಧೊಳಂ" ಶಬ್ದವನ್ನು ಕೇಳಿ ಮನೆಯವರು ಬಾವಿಗೆ ಬೆಳಕು ಬಿಟ್ಟು ನೋಡುತ್ತಿರುವಾಗ ಇವನು ತಪ್ಪಿಸಿ ಕೊಂಡು ಮನೆಗೆ ಓಡಿ ಬಂದನು. ತಂದೆ ತನಗೆ ಮೋಸ ಮಾಡಿದನಲ್ಲ ಎಂಬ ಕೋಪದೊಂದಿಗೆ ತನ್ನ ಸಾಹಸ ಕಥೆಯನ್ನು ಹೇಳಿದ. ತಂದೆ ಸಮಾಧಾನದಿಂದ ಹೇಳಿದ : ''ನಿನಗೆ ಈಗ ಕದಿಯುವ ಕಲೆ ತಿಳಿಯಿತು.''

**ನಿಜವಾದ ಗುರು ಕೇವಲ ಬೋಧಿಸದೆ ಅನುಭವವನ್ನು ನೀಡುತ್ತಾರೆ.**